ಚುಟುಕು ಸುದ್ದಿ

ಭಾರತ ರತ್ನ ಪ್ರಶಸ್ತಿ ಘೋಷಣೆ ಸಿಎಂ ಸಿದ್ದರಾಮಯ್ಯ ಹರ್ಷ

ಬೆಂಗಳೂರು, ಫೆ.9: ಮಾಜಿ ಪ್ರಧಾನಿಗಳಾದ ಪಿ.ವಿ.ನರಸಿಂಹರಾವ್, ಚೌಧರಿ ಚರಣ್ ಸಿಂಗ್ ಹಾಗೂ ಕೃಷಿ ವಿಜ್ಞಾನಿ, ಹಸಿರು ಕ್ರಾಂತಿಯ ಹರಿಕಾರ ಎಂ.ಎಸ್.ಸ್ವಾಮಿನಾಥನ್ ಅವರಿಗೆ(ಮರಣೋತ್ತರ) ಭಾರತರತ್ನ ಪ್ರಶಸ್ತಿ ಘೋಷಣೆ ಮಾಡಿರುವುದು ಸಂತಸದ ಸಂಗತಿ. ಈ ಮೂವರು ವ್ಯಕ್ತಿಗಳ ಸಾಧನೆ ಮತ್ತು ಸೇವಾ ಮನೋಭಾವ ಸಮಾಜಕ್ಕೆ ಸ್ಫೂರ್ತಿಯಾಗಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಶಿಸಿದ್ದಾರೆ.

'ಸಾಮಾಜಿಕ ನ್ಯಾಯಕ್ಕಾಗಿ ಜಾತಿಗಣತಿ ಅಗತ್ಯ'

ಬೆಂಗಳೂರು, ಫೆ.9: ದೇಶದಲ್ಲಿ ಜಾತಿಗಣತಿಯನ್ನು ನಡೆಸದಿರುವುದು ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ದುರ್ಬಲಗೊಳಿಸುತ್ತದೆ. ಈ ನಿಟ್ಟಿನಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಜಾತಿಗಣತಿ ಅಗತ್ಯ ಎಂದು ಸಮಾಜಶಾಸ್ತ್ರಜ್ಞ ಸತೀಶ್ ದೇಶಪಾಂಡೆ ತಿಳಿಸಿದ್ದಾರೆ. ಬೆಂಗಳೂರು ಕಲೆಕ್ಟಿವ್ ವತಿಯಿಂದ ಸೈಂಟ್ ಕಾನೂನು ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿದ್ದ 'ಜಾತಿ ಜನಗಣತಿ ಸಾಮಾಜಿಕ ನ್ಯಾಯವನ್ನು ನೀಡುತ್ತದೆಯೇ?' ಎಂಬ ಸಂವಾದದಲ್ಲಿ ಮಾತನಾಡಿದ ಅವರು, ಜಾತಿ ಗಣತಿಯನ್ನು ಸಾಮಾಜಿಕ ನ್ಯಾಯವನ್ನು ಸಾಧಿಸುವ ಮಾರ್ಗವಾಗಿ ಬಳಕೆ ಮಾಡಿಕೊಳ್ಳಬೇಕು ಎಂದರು. 1931ರಿಂದ ಜಾತಿ ಗಣತಿಗೆ ಹಲವು ಪ್ರಯತ್ನಗಳು ನಡೆದಿದ್ದು, ಇತ್ತೀಚೆಗೆ ಬಿಹಾರದಲ್ಲಿ ಮಾತ್ರ ಅಂತಹ ಜಾತಿ ಗಣತಿ ಸಾರ್ವಜನಿಕವಾಗಿ ಪ್ರಕಟವಾಗಿದೆ. ಕರ್ನಾಟಕದ ಅಂಕಿ-ಅಂಶಗಳನ್ನು ಇನ್ನೂ ಪ್ರಕಟಿಸಬೇಕಾಗಿದೆ. ಕೇವಲ ಜಾತಿ ಎಣಿಕೆ ಮಾಡಿದರೆ ಸಾಕಾಗುವುದಿಲ್ಲ, ಜಾತಿ ಗಣತಿಯು ಸಾಮಾಜಿಕ-ಆರ್ಥಿಕ ಅಂಶಗಳನ್ನು ಹೊಂದಿರಬೇಕು ಮತ್ತು ಗಣತಿಯಲ್ಲಿ ಫಲಿತಾಂಶಗಳನ್ನು ಪ್ರಕಟಿಸಬೇಕಾಗಿದೆ ಎಂದು ಅವರು ತಿಳಿಸಿದರು. ದೇಶದಲ್ಲಿರುವ ಮೇಲ್ಜಾತಿಗಳ ಸಂಖ್ಯಾಬಲವು ತುಂಬ ಕಡಿಮೆ ಇದೆ ಎಂಬ ಅಂಶವನ್ನು ಇಂದಿಗೂ ರಹಸ್ಯವಾಗಿಯೇ ಉಳಿದುಕೊಂಡಿದೆ. ಇಂತಹ ತಿಳುವಳಿಕೆಯಿಂದಲೇ ದೇಶದ ಪ್ರಸ್ತುತ ರಾಜಕೀಯವು ನಡೆಯುತ್ತಿದೆ. ಆದರೂ ನಾವು ಮೇಲ್ವರ್ಗದವರನ್ನು ಅಲ್ಪ ಸಂಖ್ಯಾತರೆಂದು ಮಾತನಾಡುವುದಿಲ್ಲ ಎಂದು ಅವರು ತಿಳಿಸಿದರು.

ವಿಜಯೇಂದ್ರ, ಶರಣರು ಹೇಳಿದ ಪಾಠ ಅರಿತು ನಿಜ ಲಿಂಗಾಯತನಾಗಲಿ: ಕಾಂಗ್ರೆಸ್

ಬೆಂಗಳೂರು, ಫೆ.9: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೆಸ್ಸೆಸ್ ಪಾಠ ಕಲಿಯುವುದನ್ನು ಬಿಟ್ಟು, ಶರಣರು ಹೇಳಿದ ಪಾಠ ಅರಿತು ನಿಜ ಲಿಂಗಾಯತನಾಗಲಿ ಎಂದು ಕಾಂಗ್ರೆಸ್ ಸಲಹೆ ನೀಡಿದೆ. ಮಾಂಸಾಹಾರ ಸೇವಿಸಿ ಸುತ್ತೂರು ಜಗದ್ಗುರುಗಳ ಗದ್ದುಗೆಗೆ ಸಿಎಂ ಸಿದ್ದರಾಮಯ್ಯ ಭೇಟಿ ನೀಡಿದ್ದಾರೆ ಎಂದು ವಿಜಯೇಂದ್ರ ಮಾಡಿರುವ ಟೀಕೆಗೆ ಎಕ್ಸ್ ಜಾಲತಾಣದಲ್ಲಿ ತಿರುಗೇಟು ನೀಡಿರುವ ಕಾಂಗ್ರೆಸ್, ಬಿಜೆಪಿ ನಾಯಕರು ಸಿದ್ದರಾಮಯ್ಯನವರ ಊಟದ ತಟ್ಟೆಯ ಬಗ್ಗೆ ಗೂಢಚಾರಿಕೆ ಮಾಡುವ ಬದಲು ಒಕ್ಕೂಟ ಸರಕಾರದ ಅನ್ಯಾಯದ ಬಗ್ಗೆ ಧ್ವನಿ ಎತ್ತಿದ್ದರೆ ಕನ್ನಡಿಗರ ವಿಶ್ವಾಸ ಗಳಿಸಬಹುದಿತ್ತು ಎಂದು ಹೇಳಿದೆ. ಸಿ.ಟಿ.ರವಿ ಹಾಗೂ ಪ್ರತಾಪಸಿಂಹ ಅವರಷ್ಟು ಕೀಳು ಮಟ್ಟಕ್ಕೆ ಯಡಿಯೂರಪ್ಪನವರ ಮಗ ಬಿ.ವೈ.ವಿಜಯೇಂದ್ರ ಇಳಿಯಬಾರದಿತ್ತು. ಮುಖ್ಯಮಂತ್ರಿ ಸುತ್ತೂರು ಮಠಕ್ಕೆ ಮಾಂಸ ಸೇವಿಸಿ ಹೋದರು ಎನ್ನುವ ಕೆಲಸಕ್ಕೆ ಬಾರದ ಟೀಕೆ ಮಾಡಿಕೊಂಡಿರುವ ರಾಜ್ಯ ಬಿಜೆಪಿ ನಾಯಕರಿಗೆ ಬಸವ ತತ್ವದ ಅರಿವು ಕಿಂಚಿತ್ತೂ ಇಲ್ಲ ಎಂದು ಕಾಂಗ್ರೆಸ್ ಹೇಳಿದೆ. 'ಉದಯವಾಯಿತ್ತು ಕಂಡು ಉದರಕ್ಕೆ ಕುದಿವರಯ್ಯಾ, ಕತ್ತಲೆಯಾಯಿತ್ತ ಕಂಡು ಮಜ್ಜನಕ್ಕೆರೆವರಯ್ಯಾ.. ಲಿಂಗಕ್ಕೆ ನೇಮವಿಲ್ಲ. ಇರುಳಿಗೊಂದು ನೇಮ, ಹಗಲಿಗೊಂದು ನೇಮ? ಲಿಂಗಕ್ಕೆ ನೇಮವಿಲ್ಲ. ಕಾಯ ಒಂದು ದೆಸೆ, ಜೀವ ಒಂದು ದೆಸೆ, ಗುಹೇಶ್ವರನೆಂಬ ಲಿಂಗ ತಾನೊಂದು ದೆಸೆ. ವಿಜಯೇಂದ್ರರವರು ಆರೆಸ್ಸೆಸ್ ಪಾಠ ಕಲಿಯುವುದನ್ನು ಬಿಟ್ಟು ಶರಣರು ಹೇಳಿದ ಪಾಠ ಅರಿತು ನಿಜ ಲಿಂಗಾಯತನಾಗಲಿ ಎಂದು ಕಾಂಗ್ರೆಸ್ ಹೇಳಿದೆ.

ಮಂಡ್ಯ ಟಿಕೆಟ್‌ಗಾಗಿ ಸುಮಲತಾ ಲಾಬಿ



ಬೆಂಗಳೂರು, ಫೆ.9: ಮುಂಬರಲಿರುವ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ಮತ್ತೊಮ್ಮೆ ಕಣಕ್ಕಿಳಿಯಲು ಹಾಲಿ ಸಂಸದೆ ಸುಮಲತಾ ಅಂಬರೀಶ್ ಅವರು ಹೊಸದಿಲ್ಲಿಯಲ್ಲಿ ತೀವ್ರ ಲಾಬಿ ನಡೆಸಿದ್ದು, ಬಿಜೆಪಿಯಿಂದ ಸ್ಪರ್ಧಿಸಲು ತಮಗೆ ಅವಕಾಶ ಕಲ್ಪಿಸಬೇಕೆಂದು ಪಕ್ಷದ ವರಿಷ್ಠರಿಗೆ ಮನವಿ ಮಾಡಿದ್ದಾರೆ. ಬಿಜೆಪಿ-ಜೆಡಿಎಸ್ ಮೈತ್ರಿ ಹಿನ್ನೆಲೆಯಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡುವ ಸಾಧ್ಯತೆ ಹಿನ್ನೆಲೆಯಲ್ಲಿ ಸಂಸದೆ ಸುಮಲತಾ ಅವರು, ಪ್ರಧಾನಿ ನರೇಂದ್ರ ಮೋದಿ ಅವರನ್ನು ಖುದ್ದು ಭೇಟಿ ಮಾಡಿ, 'ಕ್ಷೇತ್ರವನ್ನು ಯಾವುದೇ ಕಾರಣಕ್ಕೂ ಜೆಡಿಎಸ್‌ಗೆ ಬಿಟ್ಟುಕೊಡಬಾರದು.

ಬಿಜೆಪಿಯಿಂದ ಸ್ಪರ್ಧಿಸಲು ತಮಗೆ ಅವಕಾಶ ಕಲ್ಪಿಸಬೇಕು ಎಂದು ಕೋರಿದ್ದಾರೆಂದು ಗೊತ್ತಾಗಿದೆ. ಗುರುವಾರ ಬಿಜೆಪಿ ರಾಷ್ಟ್ರೀಯಾಧ್ಯಕ್ಷ ಜೆ.ಪಿ.ನಡ್ಡಾ ಮತ್ತು ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರನ್ನು ಭೇಟಿ ಮಾಡಿದ್ದ ಸುಮಲತಾ, ಶುಕ್ರವಾರ ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದ್ದಾರೆಂದು ತಿಳಿದು ಬಂದಿದೆ. ಲೋಕಸಭಾ ಚುನಾವಣೆಯಲ್ಲಿ ಮಂಡ್ಯ, ಹಾಸನ, ತುಮಕೂರು, ಕೋಲಾರ ಕ್ಷೇತ್ರಗಳ ಮೇಲೆ ಜೆಡಿಎಸ್ ಕಣ್ಣಿಟ್ಟಿದೆ. ಅಲ್ಲದೆ, ಬಿಜೆಪಿ-ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಮಂಡ್ಯ ಕ್ಷೇತ್ರದಿಂದ ಯಾರು ಕಣಕ್ಕಿಳಿಯುತ್ತಾರೆಂಬ ಕುತೂಹಲ ಸೃಷ್ಟಿಸಿದೆ. ಈ ಮಧ್ಯೆ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರನ್ನು ಕಣಕ್ಕಿಳಿಸುವ ಮಾತುಗಳು ಕೇಳಿಬರುತ್ತಿದೆ. ಬಿಜೆಪಿಗೆ ಬಾಹ್ಯ ಬೆಂಬಲ ಘೋಷಿಸಿರುವ ಸಂಸದೆ ಸುಮಲತಾ, ಈ ಬಾರಿ ಮಂಡ್ಯ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದು, ಅವರಿಗೆ ಟಿಕೆಟ್ ನೀಡುವ ಸಾಧ್ಯತೆ ಇಲ್ಲ ಎಂದೇ ಹೇಳಲಾಗುತ್ತಿದೆ. ಈ ಬೆಳವಣಿಗೆಗಳ ನಡುವೆಯೇ ಹಾಲಿ ಸಂಸದೆ ಸುಮಲತಾ, ಬಿಜೆಪಿ ವರಿಷ್ಠರನ್ನು ಭೇಟಿ ಮಾಡಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಅಮೆರಿಕ ಮೂಲದ ಅಮ್‌ಚಾಮ್ ಸಂಸ್ಥೆಯೊಂದಿಗೆ ಸರಕಾರದ ಒಪ್ಪಂದ

ಬೆಂಗಳೂರು, ಫೆ.9: ತಂತ್ರಜ್ಞಾನ ಕ್ಷೇತ್ರದಲ್ಲಿ ಬಲವಾದ ಬಾಂಧವ್ಯ ಸಾಧಿಸಿ, ವ್ಯಾಪಾರ ವಹಿವಾಟುವಿನಲ್ಲಿ ಸಂಬಂಧವನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರವು ಅಮೆರಿಕನ್ ಚೇಂಬರ್ ಆಫ್ ಕಾಮರ್ಸ್ ಇನ್ ಇಂಡಿಯಾ (ಅಮ್‌ಚಾಮ್ ಇಂಡಿಯಾ)ದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಐಟಿ ಮತ್ತು ಬಿಟಿ ಇಲಾಖೆಯ ಅಡಿಯಲ್ಲಿ ಬರುವ ಕರ್ನಾಟಕ ಇನೋವೇಶನ್ ಮತ್ತು ಟೆಕ್ನಾಲಜಿ ಸೊಸೈಟಿ (ಕಿಟ್ಸ್) ರಾಜ್ಯ ಸರಕಾರದ ಪರವಾಗಿ ಒಪ್ಪಂದಕ್ಕೆ ಸಹಿ ಹಾಕಿದೆ.

ಈ ಕುರಿತು ಮಾತನಾಡಿರುವ ಐಟಿ ಮತ್ತು ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಈ ಒಪ್ಪಂದವು ಎರಡೂ ದೇಶಗಳಿಗೆ ಹೊಸ ಅವಕಾಶಗಳನ್ನು ತೆರೆದಿಡಲಿದೆ, ಶೈಕ್ಷಣಿಕ ಮತ್ತು ಉದ್ಯಮದ ಕ್ಷೇತ್ರದಲ್ಲಿ ವಿನೂತನವಾಗಿ ಕೆಲಸ ಮಾಡಲಿದೆ. 'ಪರಿಣತಿ ಮತ್ತು ಭವಿಷ್ಯದ ಬೆಳವಣಿಗೆ, ಇಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ (ಐಟಿ) ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಕರ್ನಾಟಕವನ್ನು ಜಾಗತಿಕ ಮಟ್ಟದಲ್ಲಿ ಕೊಂಡೊಯ್ಯಲು ಈ ಒಪ್ಪಂದ ಸಹಕಾರಿಯಾಗಲಿದೆ. ರಾಜ್ಯ ಸರಕಾರವು ಉದ್ಯಮ ಮತ್ತು ಶೈಕ್ಷಣಿಕ ನಾಯಕರೊಂದಿಗೆ ಸಮಾಲೋಚಿಸಿ ಈ ಒಪ್ಪಂದಕ್ಕೆ ಸಹಿ ಹಾಕಿದೆ ಎಂದರು.

> ರಾಜ್ಯ ಸರಕಾರವು ಅಮೆರಿಕನ್ ಚೇಂಬರ್ ಆಫ್ ಕಾಮರ್ಸ್ ಇನ್ ಇಂಡಿಯಾ (ಅಮ್‌ಚಾಮ್ ಇಂಡಿಯಾ)ದೊಂದಿಗಿನ ವ್ಯಾಪಾರ ಒಪ್ಪಂದವು ಪೈಪ್‌ಲೈನ್‌ನಲ್ಲಿರುವ ಇನ್ನೂ ಹೆಚ್ಚಿನವುಗಳಲ್ಲಿ ಪ್ರಮುಖವಾಗಿದ್ದು, ಅಂತಹ ಒಪ್ಪಂದಗಳು ಮುಂಬರುವ ವರ್ಷಗಳಲ್ಲಿ ತಂತ್ರಜ್ಞಾನ ಪಾಲುದಾರರಾದ ಯುಎಸ್ ಮತ್ತು ಕರ್ನಾಟಕವನ್ನು ಇನ್ನಷ್ಟು ಸಮೀಪಕ್ಕೆ ತರಲಿದೆ. ಒಪ್ಪಂದವು ಸಾಮಾನ್ಯ ಸವಾಲುಗಳನ್ನು ಗುರುತಿಸಿ, ಪರಿಹರಿಸುತ್ತದೆ, ಜೊತೆಗೆ, ನಾವೀನ್ಯತೆಯನ್ನು ಬೆಂಬಲಿಸಿ, ಐಟಿ, ಬಿಟಿ ಮತ್ತು ಇಎಸ್‌ಡಿಎಂ ಪರಿಸರ ವ್ಯವಸ್ಥೆಯನ್ನು ಮುಂದಕ್ಕೆ ತೆಗೆದುಕೊಂಡು ಹೋಗಲು ಉತ್ತೇಜಿಸುತ್ತದೆ.
>
> **I ಪ್ರಿಯಾಂಕ್ ಖರ್ಗೆ,** ಐಟಿ, ಬಿಟಿ ಸಚಿವ

ಈ ನೂತನ ಒಪ್ಪಂದವು ಭಾರತದಲ್ಲಿ ಅಮೆರಿಕ ಕಂಪೆನಿಗಳ ಹೂಡಿಕೆಯನ್ನು ಉತ್ತೇಜಿಸಲಿದ್ದು, ವ್ಯಾಪಾರ ವಹಿವಾಟನ್ನು ಬೆಂಬಲಿಸಲಿದೆ. ಈ ಮೂಲಕ ಅಮೆರಿಕ ಮತ್ತು ಭಾರತದ ನಡುವಿನ ದ್ವಿಪಕ್ಷೀಯ ವ್ಯಾಪಾರವು ಇನ್ನಷ್ಟು ಬಲಗೊಳ್ಳಲಿದೆ. ಇದಲ್ಲದೆ, ಎರಡೂ ದೇಶಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳೊಂದಿಗೆ ಸಹಕಾರಿ ಉಪಕ್ರಮಗಳನ್ನು ವೇಗವಾಗಿ ಟ್ರ್ಯಾಕ್ ಮಾಡುವ ನಿರೀಕ್ಷೆಯಿದೆ ಎಂದು ಅವರು ಹೇಳಿದರು.

ಕ್ರಮಗಳ ವೇಗ ಮತ್ತು ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ಜಂಟಿ ಕಾರ್ಯಕ್ರಮ ಸ್ಟೀರಿಂಗ್ ಸಮಿತಿಯನ್ನು (ಜೆಪಿಎಸ್ಸಿ) ರಚಿಸಲು ಕಿಟ್ಸ್ ಮತ್ತು ಅಮ್‌ಚಾಮ್ ಇಂಡಿಯಾ ಒಪ್ಪಿಕೊಂಡಿವೆ. ಪ್ರತಿ ಮೂರು ತಿಂಗಳಿಗೊಮ್ಮೆ ಜೆಪಿಎಸ್ಸಿ ಮುಖಾಮುಖಿ ಅಥವಾ ವೀಡಿಯೊ ಕಾನ್ಫರೆನ್ಸ್ ಮೂಲಕ ಭೇಟಿಯಾಗುವ ನಿರೀಕ್ಷೆಯಿದೆ ಮತ್ತು ಕಾರ್ಯಕ್ರಮಗಳ ಕಾರ್ಯಗತಗೊಳಿಸುವಿಕೆಯ ಕಾರ್ಯಕ್ಷಮತೆಯ ಆಧಾರದ ಮೇಲೆ ವಾರ್ಷಿಕ ವರದಿಯನ್ನು ಸಲ್ಲಿಸುವ ಜವಾಬ್ದಾರಿಯನ್ನು ಹೊಂದಿದೆ ಎಂದು ಪ್ರಿಯಾಂಕ್ ಖರ್ಗೆ ತಿಳಿಸಿದರು.

ಶಾಸಕರು ಕಲಾಪದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು: ಸ್ಪೀಕರ್

ಬೆಂಗಳೂರು, ಫೆ.9: ಎಲ್ಲ ಶಾಸಕರು ಅಧಿವೇಶನ ಕಲಾಪದ ನೀತಿ-ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ವಿಧಾನಸಭೆಯ ಸ್ಪೀಕರ್ ಯು.ಟಿ.ಖಾದರ್ ತಿಳಿಸಿದ್ದಾರೆ.

ಶುಕ್ರವಾರ ನಗರದ ರಾಜಭವನ ರಸ್ತೆಯ ಖಾಸಗಿ ಹೊಟೇಲ್‌ನಲ್ಲಿ ಕರ್ನಾಟಕ ವಿಧಾನ ಮಂಡಲ ತರಬೇತಿ ಸಂಸ್ಥೆಯ ವತಿಯಿಂದ ಹಮ್ಮಿಕೊಳ್ಳಲಾದ 16ನೇ ವಿಧಾನಸಭೆಯ ಸದಸ್ಯರಿಗೆ ಬಜೆಟ್ ಕುರಿತು ತರಬೇತಿ ಶಿಬಿರ ಹಾಗೂ ಪತ್ರಿಕಾ ಮತ್ತು ವಿದ್ಯುನ್ಮಾನ ಮಾಧ್ಯಮದ ವರದಿಗಾರರಿಗೆ ತರಬೇತಿ ಶಿಬಿರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಶಾಸಕರು ತಮ್ಮ ತಮ್ಮ ಕ್ಷೇತ್ರ, ರಸ್ತೆ, ಸೇತುವೆಗಳಿಗೆ ಸೀಮಿತವಾದ ನೀತಿ ನಿರೂಪಣೆ, ಶಾಸನ ರಚನೆಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಶಾಸಕರು ವಿವಿಧ ವಿಷಯಗಳ ಬಗ್ಗೆ, ವಿಧಾನ ಮಂಡಲದ ಕಲಾಪಗಳ ಬಗ್ಗೆ ಅಧಿಕಾರಿಗಳು, ಹಿರಿಯ ಶಾಸಕರ ಜೊತೆ ಚರ್ಚೆ ಮಾಡಿ ಹೆಚ್ಚೆಚ್ಚು ಮಾಹಿತಿ ಸಂಗ್ರಹಿಸಿಕೊಳ್ಳಬೇಕು. ಅವಕಾಶ ಸಿಕ್ಕಾಗ ಆಕರ್ಷಕವಾಗಿ ತಮ್ಮ ವಿಚಾರ ಮಂಡನೆ ಮಾಡಲು ಪ್ರಯತ್ನಿಸಬೇಕು ಎಂದು ಯು.ಟಿ.ಖಾದರ್ ಕಿವಿಮಾತು ಹೇಳಿದರು.

ಪರಿಷತ್‌ನ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಶಾಸಕರು ಉತ್ತಮ ರೀತಿಯಲ್ಲಿ ಅಧ್ಯಯನ ನಡೆಸಿಕೊಂಡು ಬಂದರೆ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಬಹುದು. ವಿಧಾನ ಮಂಡಲದ ಗ್ರಂಥಾಲಯದಲ್ಲಿ ಪುಸ್ತಕ ಭಂಡಾರವೇ ಇದೆ. ಜೊತೆಗೆ ಕಲಾಪಗಳ ಸಂಪೂರ್ಣ ಮಾಹಿತಿಯೇ ಇದೆ. ಶಾಸಕರು ಇದನ್ನು ಬಳಸಿಕೊಂಡು ಉತ್ತಮ ಸಂಸದೀಯ ಪಟುಗಳಾಗಿ ಹೊರಹೊಮ್ಮಬೇಕು ಎಂದರು.

ಶಾಸಕರಿಗೆ ತರಬೇತಿ ನೀಡಿದರೆ ಸದನದಲ್ಲಿ ಯಾವ ರೀತಿ ಪ್ರಶ್ನೆ ಕೇಳಬೇಕು, ಯಾವ ರೀತಿ ಉತ್ತರ ನೀಡಬೇಕು ಎನ್ನುವ ಬಗ್ಗೆ ಮಾಹಿತಿ ದೊರೆಯುತ್ತದೆ. ಆಯವ್ಯಯ ಹಾಗೂ ಬಿಲ್ಲಿನ ಬಗ್ಗೆ ಚರ್ಚಿಸುವಾಗ ನಿಮ್ಮಲ್ಲಿರುವ ವಿಚಾರವನ್ನು ಹೇಳುವ ಎಲ್ಲಾ ಹಕ್ಕಿದೆ. ಸದನ ಪ್ರಾರಂಭದಿಂದ ಸದನ ಮುಗಿಯುವವರೆಗೂ ಸದಸ್ಯರು ಇರಬೇಕು. ಶಾಸನ ಪ್ರಾರಂಭವಾದಾಗ ಅಜೆಂಡಾ ಓದಬೇಕು ಎಂದು ಬಸವರಾಜ ಹೊರಟ್ಟಿ ತಿಳಿಸಿದರು.

ಶಿಬಿರದಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಪ್ರೆಸ್‌ಕ್ಲಬ್ ಅಧ್ಯಕ್ಷ ಆರ್.ಶ್ರೀಧರ್,

> ಎಲ್ಲ ಶಾಸಕರು ಸದನದಲ್ಲಿ ಸಕ್ರಿಯವಾಗಿ ಭಾಗವಹಿಸಿ ಚರ್ಚಿಸಬೇಕು. ಬಜೆಟ್ ಬಗ್ಗೆ ಸಮರ್ಪಕವಾಗಿ ಅರ್ಥ ಮಾಡಿ ಕೊಂಡು ಚರ್ಚೆಯಲ್ಲಿ ಭಾಗವಹಿ ಸುವುದರಿಂದ ವ್ಯಕ್ತಿ ವಿಕಸನಕ್ಕೆ ಅವಕಾಶ ಸಿಗುತ್ತದೆ. ಜನಪ್ರತಿನಿಧಿಗಳು, ಮಾಧ್ಯಮ ಮಿತ್ರರು ಜೊತೆ ಜೊತೆಯಾಗಿ ಸಾಗಬೇಕು.
>
> **I ಯು.ಟಿ.ಖಾದರ್,** ಸ್ಪೀಕರ್,ವಿಧಾನಸಭೆ

ಪತ್ರಕರ್ತ ರವಿ ಹೆಗಡೆ, ಶಾಸಕ ಅಪ್ಪಾಜಿ ಸಿ.ಎಸ್.ನಾಡಗೌಡ ಸೇರಿದಂತೆ ಹಲವು ಸಚಿವರು, ಶಾಸಕರು ಉಪಸ್ಥಿತರಿದ್ದರು.

'ಒಂದು ರೂ. ಖರ್ಚಿಗೂ ಅನುಮೋದನೆ ಕಡ್ಡಾಯ'

ಬೆಂಗಳೂರು, ಫೆ.9: ರಾಜ್ಯದ ಹಣಕಾಸಿನ ವ್ಯವಸ್ಥೆಯಲ್ಲಿ ಒಂದು ರೂಪಾಯಿ ಖರ್ಚು ಮಾಡುವುದಕ್ಕೂ ವಿಧಾನ ಮಂಡಲದ ಅನುಮೋದನೆ ಕಡ್ಡಾಯವಾಗಿದ್ದು, ಈ ಕುರಿತು ಶಾಸಕರು ಬಜೆಟ್ ಮೇಲೆ ಚರ್ಚೆಯಲ್ಲಿ ಭಾಗವಹಿಸಿ ವಿಷಯಗಳನ್ನು ಪ್ರಸ್ತಾಪಿಸಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಭಿಪ್ರಾಯಪಟ್ಟಿದ್ದಾರೆ.

ಶುಕ್ರವಾರ ನಗರದ ರಾಜಭವನ ರಸ್ತೆಯ ಖಾಸಗಿ ಹೊಟೇಲ್‌ನಲ್ಲಿ ಕರ್ನಾಟಕ ವಿಧಾನ ಮಂಡಲ ತರಬೇತಿ ಸಂಸ್ಥೆಯ ವತಿಯಿಂದ ನಡೆದ 16ನೇ ವಿಧಾನ ಸಭೆಯ ಸದಸ್ಯರಿಗೆ ಬಜೆಟ್ ಕುರಿತು ತರಬೇತಿ ಶಿಬಿರದಲ್ಲಿ ವಿಶೇಷ ಉಪನ್ಯಾಸ ನೀಡಿದ ಅವರು, ಜನರ ತೆರಿಗೆ ಹಣ ಸದ್ಬಳಕೆಯಾಗಬೇಕು ಎನ್ನುವುದೇ ಅಧಿವೇಶನದ ಉದ್ದೇಶವಾಗಿದೆ ಎಂದರು.

ಶಾಸಕರು ತಮ್ಮ ಕ್ಷೇತ್ರಕ್ಕೆ ಸೀಮಿತವಾಗದೆ, ರಾಜ್ಯದ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ವಿಧಾನಮಂಡಲದಲ್ಲಿ ಮೌಲ್ಯಯುತವಾದ ಚರ್ಚೆಗಳಿಗೆ ಪೂರ್ವ ತಯಾರಿ ಮಾಡಿಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು.

ಕ್ಷೇತ್ರದ ಅಭಿವೃದ್ಧಿಗೆ ಮಹತ್ವ ನೀಡಬೇಕು. ಆದರೆ, ತಾವು ಕರ್ನಾಟಕ ವಿಧಾನಸಭಾ ಸದಸ್ಯರೆಂಬುದನ್ನು ಶಾಸಕರು ಮರೆಯಬಾರದು. ವಿಧಾನಮಂಡಲ ಹಾಗೂ ಮುನ್ಸಿಪಾಲಿಟಿ ನಡುವೆ ವ್ಯತ್ಯಾಸವಿದೆ. ಶಾಸಕರು ಸೀಮಿತವಾಗಿ ಯೋಚಿಸಬಾರದು. ವಿಧಾನಮಂಡಲದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಂತಹ ಹಿರಿಯರು ಮಾತನಾಡುವುದನ್ನು ಗಮನಿಸಿದರೆ ಬಹಳಷ್ಟು ವಿಚಾರಗಳು ತಿಳಿಯುತ್ತವೆ. ಆದರೆ, ಎಲ್ಲದಕ್ಕೂ ಆಸಕ್ತಿ ಮುಖ್ಯ ಎಂದು ಕೃಷ್ಣ ಬೈರೇಗೌಡ ಹೇಳಿದರು.

ಫೆಬ್ರವರಿಯಲ್ಲಿ ಬಜೆಟ್ ಮಂಡನೆಯಾದಾಗ ಸದಸ್ಯರು ಪೂರ್ತಿಯಾಗಿ ಓದಿಕೊಳ್ಳಲು ಆಗುವುದಿಲ್ಲ ಎಂಬ ಕಾರಣಕ್ಕೆ ಆರಂಭದ ಮೂರು ತಿಂಗಳು ಲೇಖಾನುದಾನ ಪಡೆಯಲಾಗುತ್ತದೆ. ಬಳಿಕ ಜೂನ್ ಅಥವಾ ಜುಲೈನಲ್ಲಿ ಪೂರ್ಣ ಪ್ರಮಾಣದ ಬಜೆಟ್‌ಗೆ ಅಂಗೀಕಾರ ಪಡೆಯಲಾಗುತ್ತದೆ. ಶಾಸಕರು ಬಜೆಟ್ ಭಾಷಣದ ಪ್ರತಿಯನ್ನು ಮಾತ್ರ ಓದದೇ ಅದರ ಜೊತೆಗೆ ನೀಡಲಾಗುವ ಆರ್ಥಿಕ ಸಮೀಕ್ಷಾ ವರದಿ ಸೇರಿದಂತೆ ಹೆಚ್ಚುವರಿ ದಾಖಲೆಗಳನ್ನು ಅಧ್ಯಯನ ಮಾಡಬೇಕು. ಆಗ ಮಾತ್ರವೇ ಬಜೆಟ್ ಮೇಲೆ ಅಧಿಕೃತವಾಗಿ ಮಾತನಾಡುವ ಸಾಮರ್ಥ್ಯ ಬರುತ್ತದೆ ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

ಶಾಸಕರು ತಮ್ಮ ತಮ್ಮ ಕ್ಷೇತ್ರಗಳಿಗೆ ಅನುದಾನವನ್ನು ಕೇಳುವುದಕ್ಕಷ್ಟೇ ಸೀಮಿತವಾಗಬಾರದು. ನಾಡಿನ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಚರ್ಚೆಯಲ್ಲಿ ಭಾಗವಹಿಸಬೇಕು. ಆಸಕ್ತಿ ಇರುವವರಿಗೆ ಅವಕಾಶಗಳು ತಾನಾಗೇ ಒಲಿದು ಬರುತ್ತವೆ ಎಂದು ಕೃಷ್ಣ ಬೈರೇಗೌಡ ಹೇಳಿದರು.

ಬೆಂಗಳೂರು ನಗರದ ಕನ್ನಿಂಗ್ ಹ್ಯಾಮ್ ರಸ್ತೆಯಲ್ಲಿರುವ ರಾಜ್ಯ ವಕ್ಫ್ ಬೋರ್ಡ್ ಕಚೇರಿಯಲ್ಲಿ ಕಾನೂನು ಶಾಖೆ ಹಾಗೂ ಇ-ಕಚೇರಿ ವ್ಯವಸ್ಥೆಗೆ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವ ಝಮೀರ್ ಅಹ್ಮದ್ ಖಾನ್ ಶುಕ್ರವಾರ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ವಕ್ಫ್ ಬೋರ್ಡ್ ಅಧ್ಯಕ್ಷ ಕೆ.ಅನ್ವರ್ ಬಾಷಾ ಮತ್ತಿತರರು ಉಪಸ್ಥಿತರಿದ್ದರು.

ಅಪರಾಧ ಹಿನ್ನೆಲೆಯಿರುವವರು ಚುನಾವಣೆಗೆ ಸ್ಪರ್ಧಿಸಲು ಅವಕಾಶ ನೀಡದಂತೆ ಒತ್ತಾಯ

ಬೆಂಗಳೂರು, ಫೆ.9: ಅಪರಾಧ ಹಿನ್ನೆಲೆಯಿರುವ ಅಥವಾ ಯಾವುದೇ ಪ್ರಕರಣ ಬಾಕಿಯಿರುವ ಅಭ್ಯರ್ಥಿಗಳಿಗೆ ಯಾವುದೇ ಕಾರಣಕ್ಕೆ ಚುನಾವಣೆಗೆ ಸ್ಪರ್ಧಿಸಲು ಅವಕಾಶ ನೀಡಬಾರದು ಎಂದು ನಾಗರಿಕ ಸಮಾಜ ವೇದಿಕೆಯು ಒತ್ತಾಯಿಸಿದೆ.

ಶುಕ್ರವಾರ ಗಾಂಧಿಭವನದಲ್ಲಿ ನಾಗರಿಕ ಸಮಾಜ ವೇದಿಕೆಯು ಸಿದ್ಧಪಡಿಸಿದ್ದ 2024ರ ಲೋಕಸಭೆ ಚುನಾವಣೆಗೆ ಪ್ರಣಾಳಿಕೆಯನ್ನು ಮುಖ್ಯಮಂತ್ರಿ ಚಂದ್ರು, ರಮೇಶ್ ಬಾಬು, ಕೆ.ವಿ.ನಾರಾಯಣ್‌ಸ್ವಾಮಿ, ಸುರಭಿ ಹೊದಿಗೆರೆ ಸೇರಿದಂತೆ ಮತ್ತಿತರರು ಬಿಡುಗಡೆ ಮಾಡಿದರು.

ಕೋಮು ದ್ವೇಷವನ್ನು ಹರಡುವ ಅಥವಾ ದ್ವೇಷ ಭಾಷಣದಲ್ಲಿ ತೊಡಗಿಕೊಳ್ಳುವ ವ್ಯಕ್ತಿಗಳ, ಜನಾಂಗೀಯ ಹತ್ಯೆಗೆ ಕರೆ ನೀಡುವವರ ವಿರುದ್ಧ ಕ್ರಮ ಜರುಗಿಸಬೇಕು. ಮಹಿಳೆಯರು, ತೃತೀಯ ಲಿಂಗಿಗಳು, ಹಾಗೂ ಲೈಂಗಿಕ ಅಲ್ಪಸಂಖ್ಯಾತರು, ಮತ್ತಿತರರ ಮೇಲಿನ ದೌರ್ಜನ್ಯವನ್ನು ನಿಯಂತ್ರಿಸಲು ಚುನಾವಣಾ ಆಯೋಗವು ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಪ್ರಣಾಳಿಕೆಯಲ್ಲಿ ಒತ್ತಾಯಿಸಲಾಗಿದೆ.

ಬೇನಾಮಿ ಚುನಾವಣಾ ಬಾಂಡ್‌ಗಳನ್ನು ರದ್ದುಗೊಳಿಸಬೇಕು. ಜನರು ನೀಡಿದ ಆದೇಶವನ್ನು ಧಿಕ್ಕರಿಸಿದ ಸರಕಾರವನ್ನು ಆಡಳಿತದ ಚುಕ್ಕಾಣಿಯಿಂದ ಕೆಳಗಿಳಿಸುವ ಹಕ್ಕನ್ನು ನೀಡುವ 10ನೇ ಶೆಡ್ಯೂಲ್‌ಗೆ ತಿದ್ದುಪಡಿ ಮಾಡಬೇಕು. ಯಾವುದೇ ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ವಲಯದಿಂದ ದೇಣಿಗೆ ನೀಡುವುದನ್ನು ನಿಷೇಧಿಸಬೇಕು ಎಂದು ಉಲ್ಲೇಖಿಸಲಾಗಿದೆ.

ಎಲ್ಲ ಜನವಿರೋಧಿ ಹಾಗೂ ಪರಿಸರ ವಿರೋಧಿ ನೀತಿ ಹಾಗೂ ಕಾನೂನುಗಳನ್ನು ರದ್ದುಗೊಳಿಸಬೇಕು. ಶ್ರೀಮಂತರಿಗೆ ನೀಡುವ ಸಬ್ಸಿಡಿಗಳು, ತೆರಿಗೆ ವಿನಾಯಿತಿಗಳು ಮತ್ತು ಸಾಲ ವಜಾಗೊಳಿಸುವಿಕೆಯನ್ನು ತೆಗೆದು ಹಾಕಬೇಕು. ವ್ಯಾಪಾರ ನೀತಿ ಸ್ಥಿರವಾಗಿದ್ದು, ರೈತರ, ಕಾರ್ಮಿಕರ ಮತ್ತು ಅಂಚಿಗೆ ತಳ್ಳಲ್ಪಟ್ಟವರ ಹಿತಾಸಕ್ತಿಯನ್ನು ಉತ್ತೇಜಿಸಬೇಕು. ಅನ್ಯಾಯದ ವ್ಯಾಪಾರಗಳಿಂದ ಸ್ಥಳೀಯ ಕೈಗಾರಿಕೆಗಳನ್ನು ರಕ್ಷಿಸಬೇಕು ಎಂದು ಪ್ರಣಾಳಿಕೆಯಲ್ಲಿ ತಿಳಿಸಿದೆ.

ಒಕ್ಕೂಟವನ್ನು ಬಲಪಡಿಸಬೇಕು. ರಾಜ್ಯಗಳ ಸಂವಿಧಾನಿಕ ಹಕ್ಕುಗಳ ಮೇಲಿನ ಅತಿಕ್ರಮಣವನ್ನು ನಿಲ್ಲಿಸಬೇಕು. ಸಾರ್ವಜನಿಕ ವಲಯದ ಉದ್ಯಮಗಳ ಮತ್ತು ಅತ್ಯಗತ್ಯ ಸೇವೆಗಳ ಖಾಸಗೀಕರಣಕ್ಕೆ ತಡೆ ನೀಡಬೇಕು. ದೇಶದ ಹಿತಾಸಕ್ತಿ ಮತ್ತು ಅದರ ಸಾರ್ವಭೌಮತ್ವಕ್ಕೆ ಧಕ್ಕೆಯಾಗುವಂತಹ ಅಂತರ್‌ರಾಷ್ಟ್ರೀಯ ಒಪ್ಪಂದಗಳನ್ನು ಹಿಮ್ಮೆಟ್ಟಿಸಬೇಕು ಎಂದು ವಿವರಿಸಿದೆ.

ಆಧಾರ್ ಕಾರಣಕ್ಕಾಗಿ ಯಾರನ್ನೂ ಹೊರಗಿಡಲಾಗುವುದಿಲ್ಲ ಎನ್ನುವುದನ್ನು ಖಾತ್ರಿಪಡಿಸಬೇಕು. ರಾಜ್ಯ ಸರಕಾರ ಇವುಗಳನ್ನು ಖಾಸಗೀಕರಣಕ್ಕೊಳಪಡಿಸದೇ ನೇರವಾಗಿ ಜನರಿಗೆ ಒದಗಿಸಬೇಕು. ಇವುಗಳ ಸಾರ್ವತ್ರೀಕರಣಕ್ಕಾಗಿ ಅಗತ್ಯವಿರುವ ಹಣಕಾಸಿನ ವಸ್ತುನಿಷ್ಠ ಅಂದಾಜು ರಚಿಸಿ, ಅದನ್ನು ಮೀಸಲಿಟ್ಟು, ಕೇವಲ ಯೋಜನೆಗಳ ರೂಪದಲ್ಲಿ ಮಾತ್ರವಲ್ಲದೇ, ಕಾಯ್ದೆಗಳ ಮೂಲಕ ಜಾರಿಗೊಳಿಸಬೇಕು ಎಂದು ತಿಳಿಸಿದೆ.

'ಪಲ್ಸ್ ಪೋಲಿಯೊ' ಅರಿವು ಮೂಡಿಸಲು ಸೂಚನೆ

ಬೆಂಗಳೂರು, ಫೆ.9: ನಗರದ ಪೂರ್ವ ವಲಯ ವ್ಯಾಪ್ತಿಯಲ್ಲಿ ಮಕ್ಕಳಿಗೆ ಪಲ್ಸ್ ಪೋಲಿಯೊ ಹನಿ ಹಾಕಿಸುವಂತೆ ನಾಗರಿಕರಲ್ಲಿ ಹೆಚ್ಚು ಅರಿವು ಮೂಡಿಸಬೇಕು ಎಂದು ಬಿಬಿಎಂಪಿಯ ಪೂರ್ವ ವಲಯ ಆಯುಕ್ತೆ ಸ್ನೇಹಲ್ ಆರೋಗ್ಯಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಶುಕ್ರವಾರ ಪೂರ್ವ ವಲಯ ವ್ಯಾಪ್ತಿಯದ ಕಚೇರಿಯಲ್ಲಿ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ಅವರು, ಮಾ.3ರಿಂದ ಮಾ.6ರವರೆಗೆ ಪಲ್ಸ್ ಪೋಲಿಯೊಕಾರ್ಯಕ್ರಮ ನಡೆಯಲಿದೆ. ಪೂರ್ವ ವಲಯ ವ್ಯಾಪ್ತಿಯಲ್ಲಿ 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಕಡ್ಡಾಯವಾಗಿ ಪಲ್ಸ್ ಪೋಲಿಯೊ ಹಾಕಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಪೂರ್ವ ವಲಯ ವ್ಯಾಪ್ತಿಯಲ್ಲಿ ಬರುವ ಕೊಳಗೇರಿ ಪ್ರದೇಶ, ವಲಸಿಗರು ಹೆಚ್ಚಿರುವ ಪ್ರದೇಶ, ಕಟ್ಟಡ ನಿರ್ಮಾಣ ಪ್ರದೇಶ, ಜನನಿಬಿಡ ಪ್ರದೇಶಗಳಾದ ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ, ಶಾಲೆಗಳು, ಅಂಗವಾಡಿ, ಶಿಶು ವಿಹಾರಗಳಲ್ಲಿ ಪಲ್ಸ್ ಪೋಲಿಯೊ ಕುರಿತು ಜಾಗೃತಿ ಮೂಡಿಸಲು ಸೂಚಿಸಿದರು.

ಸಭೆಯಲ್ಲಿ ವಲಯ ಜಂಟಿ ಆಯುಕ್ತೆ ಪಲ್ಲವಿ, ವಲಯ ಆರೋಗ್ಯಾಧಿಕಾರಿ ಸವಿತಾ, ಆರೋಗ್ಯ ವೈದ್ಯಾಧಿಕಾರಿಗಳು, ಫನಾ, ಕ್ರಿಡೈ ಸೇರಿದಂತೆ ಇನ್ನಿತರರು ಹಾಜರಿದ್ದರು.

> ಧ್ವನಿವರ್ಧಕಗಳ ಮೂಲಕ ಜಾಗೃತಿ ಮೂಡಿಸಿ: ಪೋಲಿಯೊ ಕಾರ್ಯಕ್ರಮದ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ನೀಡುವ ಸಲುವಾಗಿ ಪ್ರತಿನಿತ್ಯ ಮನೆಯಿಂದ ಮನೆಗೆ ತ್ಯಾಜ್ಯ ಸಂಗ್ರಹಿಸುವ ಆಟೊ ಟಿಪ್ಪರ್ ವಾಹನಗಳಲ್ಲಿ ಧ್ವನಿವರ್ಧಕಗಳ ಮೂಲಕ ಜಾಗೃತಿ ಮೂಡಿಸಿ ಎಂದು ಅಧಿಕಾರಿಗಳಿಗೆ ಬಿಬಿಎಂಪಿಯ ಪೂರ್ವ ವಲಯ ಆಯುಕ್ತೆ ಸ್ನೇಹಲ್ ಸೂಚನೆ ನೀಡಿದರು.

ಬೆಂಗಳೂರು 'ಚಿರತೆ ಕಾರ್ಯಪಡೆ': ಸಿಬ್ಬಂದಿಗೆ ತರಬೇತಿ

ಬನ್ನೇರುಘಟ್ಟ, ಫೆ.9: ಬೆಂಗಳೂರು ನಗರದ ಬೊಮ್ಮನಹಳ್ಳಿ ಕೂಡ್ಲು ಗೇಟ್ ಬಳಿ ಚಿರತೆ ಕಾಣಿಸಿಕೊಂಡ ಬಳಿಕ ಅರಣ್ಯ ಸಚಿವ ಈಶ್ವರ ಖಂಡ್ರೆ ನಿರ್ದೇಶನದ ಮೇಲೆ ರಚಿಸಲಾದ ಬೆಂಗಳೂರು ನಗರಕ್ಕೆ ಸಮರ್ಪಿತವಾದ ಕ್ಷಿಪ್ರ ಚಿರತೆ ಕಾರ್ಯಪಡೆಗೆ ಕೌಶಲ ತರಬೇತಿ ನೀಡಲಾಗುತ್ತಿದೆ.

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ಬೆಂಗಳೂರು ನಗರದ ಚಿರತೆ ಕಾರ್ಯಪಡೆಯ 100ಕ್ಕೂ ಹೆಚ್ಚು ಸಿಬ್ಬಂದಿಗೆ ಕಾರ್ಯಾಚರಣೆಯ ಕಾರ್ಯ ವಿಧಾನಗಳ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ತರಬೇತಿ ನೀಡಲಾಯಿತು. ಹೊಳೆಮತ್ತಿ ಪ್ರತಿಷ್ಠಾನದ ವನ್ಯಜೀವಿ ಸಂರಕ್ಷಕ ಹಾಗೂ ಸಂಪನ್ಮೂಲ ವ್ಯಕ್ತಿ ಸಂಜಯ್ ಗುಬ್ಬಿ ಮತ್ತು ಡೆಹರಾಡೂನ್‌ನಲ್ಲಿ ವನ್ಯಜೀವಿ ಕಾರ್ಯಾಚರಣೆಯ ತರಬೇತಿ ಪಡೆದಿರುವ ಹಿರಿಯ ಅಧಿಕಾರಿಗಳು ಕಾರ್ಯಪಡೆ ಸಿಬ್ಬಂದಿಗೆ ಕೌಶಲಗಳ ಬಗ್ಗೆ ತಿಳಿಸಿಕೊಟ್ಟರು.

ಕಾಡಿನಂಚಿನ ಹೊಲಗದ್ದೆ, ತೋಟಗಳಲ್ಲಿ ಉರುಳಿಗೆ ಸಿಲುಕುವ ಚಿರತೆ ಮತ್ತು ವನ್ಯ ಜೀವಿಗಳ ಪ್ರಾಣ ರಕ್ಷಣೆ ಮಾಡುವ ವಿಧಾನ, ಚಿರತೆಗಳು ನಾಡಿಗೆ ಬಂದಾಗ ಅವುಗಳ ಚಲನವಲನದ ಬಗ್ಗೆ ನಿಗಾ ಹೇಗೆ ಇಡಬೇಕು, ಚಿರತೆ ಹೆಜ್ಜೆ ಗುರುತಿಸುವುದು ಹೇಗೆ, ಚಿರತೆ ಸೆರೆ ಹಿಡಿಯಲು ಬೋನುಗಳನ್ನು ಹೇಗೆ ಅಳವಡಿಸಬೇಕು, ಪಶುವೈದ್ಯರು ಅರವಳಿಕೆ ಚುಚ್ಚುಮದ್ದು ನೀಡಿದ ಬಳಿಕ ಹೇಗೆ ಸೆರೆ ಹಿಡಿಯಬೇಕು, ಬಲೆಗಳನ್ನು ಹೇಗೆ ಬಳಸಬೇಕು, ಕಾರ್ಯಾಚರಣೆಯ ವೇಳೆ ಯಾವ ಯಾವ ಸುರಕ್ಷತಾ ಸಾಧನ ಧರಿಸಬೇಕು, ರಾತ್ರಿಯ ವೇಳೆ ಹೇಗೆ ಕಟ್ಟೆಚ್ಚರ ವಹಿಸಬೇಕು ಮತ್ತು ಥರ್ಮನ್ ಡ್ರೋನ್ ಕ್ಯಾಮರಾಗಳ ಬಳಕೆ ಹೇಗೆ ಮಾಡಬೇಕು ಎಂಬಿತ್ಯಾದಿ ಹಲವು ಅಂಶಗಳ ಬಗ್ಗೆ ಕಾರ್ಯಪಡೆ ಸಿಬ್ಬಂದಿಗೆ ತರಬೇತಿ ನೀಡಲಾಯಿತು.

ಬೆಂಗಳೂರು ನಗರದ ಹೊರ ವಲಯಗಳಲ್ಲಿ ಚಿರತೆಗಳು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಜನರು ಭೀತಿಗೊಳಗಾದಾಗ ಬೆಂಗಳೂರಿಗೆ ಸಮರ್ಪಿತವಾದ ಚಿರತೆಯ ಕ್ಷಿಪ್ರ ಕಾರ್ಯಪಡೆ ರಚಿಸಿ, ಸಿಬ್ಬಂದಿಗೆ ಅಗತ್ಯ ಸುರಕ್ಷತಾ ಸಾಧನ ಸಲಕರಣೆ ಒದಗಿಸಿ, ತರಬೇತಿ ನೀಡಬೇಕೆಂದು ಸಚಿವ ಈಶ್ವರ ಖಂಡ್ರೆ ಆದೇಶ ನೀಡಿದ್ದರು. ಈ ಹಿನ್ನೆಲೆಯಲ್ಲಿ ರಚಿಸಲಾಗಿರುವ ಪಡೆಗೆ ತರಬೇತಿ ನೀಡಲಾಯಿತು. ಈ ತರಬೇತಿ ವಿವಿಧ ಹಂತದಲ್ಲಿ ಮುಂದುವರಿಯಲಿದೆ ಎಂದು ಅರಣ್ಯ ಇಲಾಖೆ ತಿಳಿಸಿದೆ.

ಬೆಂಗಳೂರು ನಗರ ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಶಿವಶಂಕರ್, ಬೆಂಗಳೂರು ನಗರದ ಉಪ ಅರಣ್ಯ ಸಂರಕ್ಷಣಾಧಿಕಾರಿ ರವೀಂದ್ರ ಕುಮಾರ್ ಸೇರಿದಂತೆ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ಒಟಿಸಿಒ ಇಂಟರ್‌ನ್ಯಾಷನಲ್ ಲಿಮಿಟೆಡ್

ಕಾರ್ಪೊರೇಟ್ ಗುರುತಿನ ಸಂಖ್ಯೆ: L17114KA2001PLC028611
ರಿಜಿಸ್ಟರ್ಡ್ ಕಚೇರಿ: ಪಿ/41, 9 ಎ ಮೇನ್, ಎಲ್‌ಐಸಿ ಕಾಲನಿ, ಜೀವನ್‌ಭೀಮ ನಗರ, ಹೆಚ್.ಎ.ಎಲ್ 3ನೇ ಸ್ಟೇಜ್, ನ್ಯೂ ತಿಪ್ಪಸಂದ್ರ, ಬೆಂಗಳೂರು, ಕರ್ನಾಟಕ- 560075, ದೂರವಾಣಿ:080-25296825/ 9789053807/
ಇಮೇಲ್ ಐಡಿ- info@otco.in ವೆಬ್‌ಸೈಟ್: www.otco.in/

31ನೇ ಡಿಸೆಂಬರ್, 2023ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತುಒಂಬತ್ತು ತಿಂಗಳ ಸ್ವತಂತ್ರ ಲೆಕ್ಕಪರಿಶೋಧನೆಯಿಲ್ಲದ ಹಣಕಾಸು ಫಲಿತಾಂಶಗಳ ಹೇಳಿಕೆಯ ಸಾರ

(ಲಕ್ಷದಲ್ಲಿ, ಇ.ಪಿ.ಎಸ್ ಹೊರತುಪಡಿಸಿ)

ವಿವರ	ತ್ರೈಮಾಸಿಕ 31.12.2023 ಅನ್ ಆಡಿಟೆಡ್	ಒಂಬತ್ತು ತಿಂಗಳ 31.12.2023 ಅನ್ ಆಡಿಟೆಡ್	ತ್ರೈಮಾಸಿಕ 31.12.2022 ಅನ್ ಆಡಿಟೆಡ್	ವರ್ಷಾಂತ್ಯಕ್ಕೆ 31.03.2023 ಆಡಿಟೆಡ್
ಕಾರ್ಯನಿರ್ವಹಣೆಗಳಿಂದ (ನಿವ್ವಳ) ಆದಾಯ	62.31	126.56	28.82	143.95
ನಿಗದಿತ ಅವಧಿಗೆ ನಿವ್ವಳ ಲಾಭ / (ನಷ್ಟ) (ತೆರಿಗೆ ಮೊದಲು ಅಸಾಧಾರಣ/ ಅಸಾಮಾನ್ಯ ಐಟಂಗಳು)	3.00	6.08	7.13	9.67
ನಿಗದಿತ ಅವಧಿಗೆ ತೆರಿಗೆ ಮೊದಲು ನಿವ್ವಳ ಲಾಭ /(ನಷ್ಟ) (ಅಸಾಧಾರಣ/ಅಸಾಮಾನ್ಯ ಐಟಂಗಳು)	3.00	6.08	7.13	9.67
ನಿಗದಿತ ಅವಧಿಗೆ ತೆರಿಗೆ ನಂತರ ನಿವ್ವಳ ಲಾಭ /(ನಷ್ಟ)(ಅಸಾಧಾರಣ/ಅಸಾಮಾನ್ಯ ಐಟಂಗಳ ನಂತರ)	3.00	6.08	7.13	8.36
ನಿಗದಿತ ಅವಧಿಗೆ ಒಟ್ಟು ಸಮಗ್ರ ಆದಾಯ (ತೆರಿಗೆ ಬಳಿಕ) ನಿಗದಿತ ಅವಧಿಗೆ ಸಮಗ್ರ ಲಾಭ/ನಷ್ಟ ಮತ್ತು ಇತರ ಸಮಗ್ರ ಆದಾಯ (ತೆರಿಗೆ ಬಳಿಕ))	3.00	6.08	7.13	8.36
ತುಕ್ಕಿಟ ಶೇರು ಬಂಡವಾಳ	259.36	259.36	259.36	259.36
ರಿಸರ್ವ್ (ಕಳೆದ ವರ್ಷದ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಲಾದ ರಿವ್ಯಾಲುವೇಶನ್ ರಿಸರ್ವ್ ಹೊರತುಪಡಿಸಿ)	-	-	-	2.49
ಶೇರೊಂದಕ್ಕೆ ಗಳಿಕೆ (ಅಸಾಧಾರಣ ಐಟಂಗಳ ಬಳಿಕ)(ತಲಾ ರೂ. 2)				
ಮೂಲ	0.020	0.05	0.05	0.06
ಡಿಲ್ಯೂಟೆಡ್	0.020	0.05	0.05	0.06

a) ಮೇಲಿನ ಫಲಿತಾಂಶಗಳನ್ನು ಲೆಕ್ಕಪರಿಶೋಧನಾ ಸಮಿತಿಯು ಪರಿಶೀಲಿಸಿದೆ ಮತ್ತು ಫೆಬ್ರವರಿ 9, 2024, ಸೋಮವಾರ ನಡೆದ ಆಯಾ ಸಭೆಯಲ್ಲಿ ನಿರ್ದೇಶಕರ ಮಂಡಳಿಯಿಂದ ಅನುಮೋದಿಸಲಾಗಿದೆ.

b) ಮೇಲಿನವು 2023 ರ ಡಿಸೆಂಬರ್ 31 ಕ್ಕೆ ಕೊನೆಗೊಂಡ ತ್ರೈಮಾಸಿಕ ಮತ್ತು ಒಂಬತ್ತು ತಿಂಗಳ ಹಣಕಾಸು ಫಲಿತಾಂಶಗಳ ವಿವರವಾದ ಸ್ವರೂಪದ ಸಾರವಾಗಿದೆ, 2015 ರ ಸೆಬಿ (ಪಟ್ಟಿ ಮಾಡುವ ಹೊಣೆಗಾರಿಕೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳ 33 ರ ಅಡಿಯಲ್ಲಿ ಷೇರು ವಿನಿಮಯ ಕೇಂದ್ರದಲ್ಲಿ ಸಲ್ಲಿಸಲಾಗಿದೆ. ಇದರ ಸಂಪೂರ್ಣ ಸ್ವರೂಪ ಡಿಸೆಂಬರ್ 31, 2023 ರಂದು ಕೊನೆಗೊಂಡ ತ್ರೈಮಾಸಿಕ ಮತ್ತು ಅರ್ಧ ವರ್ಷದ ಆರ್ಥಿಕ ಫಲಿತಾಂಶಗಳು ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್ www.bseindia.com ಮತ್ತು ಕಂಪನಿಯ ವೆಬ್‌ಸೈಟ್ www.otco.in ನಲ್ಲಿ ಲಭ್ಯವಿದೆ.

ಒಟಿಸಿಒ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ
ಆಡಳಿತ ಮಂಡಳಿ ಮತ್ತು ಪರವಾಗಿ
ಸಹಿ/- ಭಾಗ್ಯಲಕ್ಷ್ಮಿ ತಿರುಮಲೈ
ಪೂರ್ಣಾವಧಿ ನಿರ್ದೇಶಕರು
Din:08186335

ಸ್ಥಳ: ಚೆನ್ನೈ
ದಿನಾಂಕ: 09.02.2024

KARVY FINANCE

ಕಾರ್ಪೊರೇಟ್ ಕಚೇರಿ: ಮೆಸರ್ಸ್ ಕಾರ್ವಿ ಫೈನಾನ್ಷಿಯಲ್ ಸರ್ವೀಸಸ್ ಲಿಮಿಟೆಡ್, 301, 3ನೇ ಮಹಡಿ, ಗುಜ್ರಾಲ್ಸ್ ಹೌಸ್, 167, ಸಿಎಸ್‌ಟಿ ರಸ್ತೆ, ಕೊಲಿವೇರಿ ಏರಿಯಾ ವಿಲೇಜ್, ಕಲೀನಾ, ಸಾಂತಾಕ್ರೂಝ್ (ಪೂರ್ವ) ಮುಂಬೈ- 400098

ಚರ ಸ್ವತ್ತು ತೆಗೆದುಹಾಕುವ ಜ್ಞಾಪನಾ ನೋಟಿಸ್

ಇವರಿಗೆ
ಶ್ರೀ ನರೇಶ್, ಶ್ರೀ ನರಸಿಂಹ ಅವರ ಮಗ, ವಯಸ್ಸು ಸುಮಾರು 30 ವರ್ಷಗಳು, ನಂ. 174/2, 1ನೇ ಮುಖ್ಯರಸ್ತೆ, ಜೆ.ಲಿಂಗಯ್ಯ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು- 560020
ವಿಷಯ: ಮೆಸರ್ಸ್ ಕಾರ್ವಿ ಫೈನಾನ್ಸಿಯಲ್ ಸರ್ವೀಸಸ್ ಲಿಮಿಟೆಡ್ (ಕೆಎಸ್‌ಎಫ್‌ಎಲ್) ಸ್ವಾಧೀನದಲ್ಲಿರುವ ಅಡಮಾನ ಆಸ್ತಿಯ ಒಳಗೆ ಇರುವ ವೈಯಕ್ತಿಕ ಗೃಹ/ವಾಣಿಜ್ಯ ವಸ್ತುಗಳು/ ಸಾಮಗ್ರಿಗಳನ್ನು ಸಾಗಿಸುವಂತೆ ಸೂಚನೆ
ಉಲ್ಲೇಖ: ಸಾಲ ಖಾತೆ ಸಂಖ್ಯೆ 703534
ಸಾಲಗಾರರು: 1. ಸಪ್ತಗಿರಿ ಹೆಬಿಟೇಟ್ಸ್ ಪ್ರೈವೇಟ್ ಲಿಮಿಟೆಡ್. 2 ಸಪ್ತಗಿರಿ ಎಂಟರ್‌ಪ್ರೈಸಸ್ (3) ಜೆ. ಅಜಯ್ ಶ್ರೀನಿವಾಸ್ (4)ದೀಪಾ (5) ಶಂಕರ ಕುಮಾರಿ

ಮಾನ್ಯರೇ

1. ಎಲ್ಲ ಸಾಲಗಾರರ ಮನವಿಯಂತೆ ಮೆಸರ್ಸ್ ಕಾರ್ವಿ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್ (ಇನ್ನು ಮುಂದೆ ಕಂಪನಿ ಎಂದು ಉಲ್ಲೇಖಿಸಲಾಗುತ್ತದೆ) ಸಾಲ ಖಾತೆ ಸಂಖ್ಯೆ 703534ರ ಅಡಿಯಲ್ಲಿ ವಿವಿಧ ಸೌಲಭ್ಯ ಸಾಲಗಳನ್ನು ಸಪ್ತಗಿರಿ ಹೆಬಿಟೇಟ್ಸ್ ಪ್ರೈವೇಟ್ ಲಿಮಿಟೆಡ್ ಹೆಸರಿನಲ್ಲಿ, ಸಾಲ ಒಪ್ಪಂದ ಮತ್ತು ಆಸ್ತಿಯ ಜಾರಿಯಡಿಯಲ್ಲಿ ನೀಡಿತ್ತು, ಇದರಡಿ ನಿರ್ದಿಷ್ಟವಾಗಿ ಶೆಡ್ಯೂಲ್ ಆಸ್ತಿಯನ್ನು ಕಂಪನಿಗೆ ಭದ್ರತಾ ಸಾಲಕ್ಕಾಗಿ ಅಡಮಾನ ಮಾಡಲಾಗಿದೆ.
2. ಕಂಪನಿಯು ನಿಮ್ಮೆಲ್ಲರಿಗೆ ನೀಡಿದ ಈ ಸಾಲಗಳನ್ನು ಮರುಪಾವತಿ ಮಾಡಲು ಸುಸ್ತಿಆದ ಹಿನ್ನೆಲೆಯಲ್ಲಿ, ಕಂಪನಿಯು ಸೂಕ್ತ ವಸೂಲಾತಿ ಕ್ರಮವನ್ನು ನಿಮ್ಮೆಲ್ಲರ ವಿರುದ್ಧ, ಸರ್ಫೇಸಿ ಕಾಯ್ದೆಯ ನಿಬಂಧನೆಗಳ ಅನ್ವಯ ಕೈಗೊಂಡಿದೆ ಹಾಗೂ ಆಸ್ತಿಯನ್ನು ಭೌತಿಕವಾಗಿ ಸ್ವಾಧೀನಕ್ಕೆ ಪಡೆದಿದೆ. ಕಂಪನಿಯು ಹೆಚ್ಚುವರಿ ಪ್ರಧಾನ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಕೋರ್ಟ್, ಬೆಂಗಳೂರು ಇವರು, ಸಿಆರ್‌ಎಲ್.ಎಂಐಎಸ್‌ಸಿ. ನಂ. 4565/2022 ದಿನಾಂಕ 16ನೇ ಆಗಸ್ಟ್ 2022ರಲ್ಲಿ ನೀಡಿದ ಆದೇಶದಂತೆ ನಿಮ್ಮ ಮೇಲೆ ಹೇಳಿದ ವಿಳಾಸದ ಈ ಶೆಡ್ಯೂಲ್ ಆಸ್ತಿಯನ್ನು 15ನೇ ಮಾರ್ಚ್ 2023ರಂದು ಭೌತಿಕವಾಗಿ ಸ್ವಾಧೀನಕ್ಕೆ ಪಡೆದಿದೆ.
3. ಭೌತಿಕ/ ವಾಸ್ತವಿಕವಾಗಿ ಅಡಮಾನ ಆಸ್ತಿಗಳನ್ನು ಸ್ವಾಧೀನಕ್ಕೆ ಪಡೆದ ದಿನದಂದು ನಿಮಗೆ ಅಡ್ವೊಕೇಟ್ ಕಮಿಷನರ್ ಅವರು ಮಾಹಿತಿ ನೀಡಿ ನಿಮ್ಮ ಎಲ್ಲ ಇರುವ ವಸ್ತುಗಳನ್ನು ಅಡಮಾನ ಆಸ್ತಿಯನ್ನು ಭೌತಿಕವಾಗಿ ಸ್ವಾಧೀನಕ್ಕೆ ಪಡೆದ ದಿನಾಂಕದಿಂದ 15 ದಿನಗಳ ಒಳಗಾಗಿ ಒಯ್ಯುವಂತೆ ಸೂಚಿಸಿದ್ದರು ಮತ್ತು ಅಡಮಾನ ಆಸ್ತಿಯನ್ನು ಖಾಲಿ ಮಾಡುವಂತೆ ಸೂಚಿಸಲಾಗಿತ್ತು. ಆದರೆ ಈ ದಿನದವರೆಗೆ ನೀವು ಅಡಮಾನ ಮಾಡಿದ ಆಸ್ತಿಯಿಂದ ಗೃಹವಸ್ತುಗಳು/ ಮಳಿಗೆಯಿಂದ ನಿಮ್ಮ ವಸ್ತುಗಳನ್ನು ಸ್ಥಳಾಂತರಿಸಿಲ್ಲ/ ಸಾಗಿಸಿಲ್ಲ/ ತೆರವುಗೊಳಿಸಿಲ್ಲ. ಇದೀಗ ಕಂಪನಿಯು ಕಾನೂನು ಪ್ರಕಾರ ವಸೂಲಾತಿ ಕ್ರಮಗಳನ್ನು ಕೈಗೊಳ್ಳುವ ಅಡಿಯಲ್ಲಿಅಡಮಾನ ಆಸ್ತಿಯನ್ನು ಹರಾಜು ಮಾಡುತ್ತಿದೆ.
4. ಆಸ್ತಿಯನ್ನು ಭೌತಿಕವಾಗಿ/ ವಾಸ್ತವವಾಗಿ ಸ್ವಾಧೀನಪಡಿಸಿಕೊಂಡ ದಿನದಿಂದ 10 ತಿಂಗಳು ಕಳೆದರೂ, ನೀವು ಅಡಮಾನ ಆಸ್ತಿಯಲ್ಲಿರುವ ಚರಾಸ್ತಿಗಳನ್ನು ಅಂದರೆ ಗೃಹಬಳಕೆಯ ಚರ ಸ್ವತ್ತುಗಳನ್ನು ಅಥವಾ ಸಾಮಗ್ರಿ/ ಸಲಕರಣೆಗಳನ್ನು ಸಾಗಿಸಲು ವಿಫಲರಾಗಿದ್ದೀರಿ ಅಥವಾ ನಿರ್ಲಕ್ಷಿಸಿದ್ದೀರಿ.
5. ಆದ್ದರಿಂದ ಈ ನೋಟಿಸ್ ಮೂಲಕ ಸೂಚಿಸುವುದೇನೆಂದರೆ ನಿಮ್ಮ ಗೃಹಬಳಕೆಯ/ ಮಳಿಗೆಯ ಚರ ಸರಕುಗಳನ್ನು ಸ್ಥಳಾಂತರಿಸಿ, ಅಡಮಾನ ಶೆಡ್ಯೂಲ್ ಆಸ್ತಿಗಳನ್ನು ತಕ್ಷಣ ಅಂದರೆ ಈ ನೋಟಿಸ್ ತಲುಪಿದ ಏಳು ದಿನಗಳ ಒಳಗಾಗಿ ಖಾಲಿ ಮಾಡಬೇಕು. ಇದು ಆಗದಿದ್ದಲ್ಲಿ ಕಂಪನಿಯು ಸೂಕ್ತ ಕ್ರಮಗಳನ್ನು ಜಾರಿಗೊಳಿಸುವುದು ಮತ್ತು ಅಡಮಾನ ಆಸ್ತಿಯನ್ನು ಎಲ್ಲ ಚರ ಗೃಹಬಳಕೆ/ಮಳಿಗೆಯ ಸರಕುಗಳ ಸಹಿತವಾಗಿ ಎಲ್ಲಿದೆಯೋ ಅಲ್ಲಿ ಆಧಾರದಲ್ಲಿ ಮಾರಾಟ ಮಾಡುವುದು ಅನಿವಾರ್ಯವಾಗುತ್ತದೆ ಹಾಗೂ ಇದನ್ನು ನಿಮ್ಮ ವೆಚ್ಚ ಹಾಗೂ ಅಪಾಯ ಸಾಧ್ಯತೆಗೆ ನೀವು ಬಾಧ್ಯಸ್ಥರಾಗುತ್ತೀರಿ.

ಸ್ಥಿರಾಸ್ತಿಯ ವಿವರ
ಹಳೆ ಸಂಖ್ಯೆ 1820/1, ಬಳಿಕದ ಸಂಖ್ಯೆ 1410/1820-3/29, ಹೊಸ ಸಂಖ್ಯೆ 13, ಪಿಐಡಿ ನಂ. 6-20-13, 2ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು, ಸಂಪಿಗೆ ರಸ್ತೆ. ಗಡಿಗಳು ಈ ಕೆಳಗಿನಂತಿವೆ: ಉತ್ತರಕ್ಕೆ: ಖಾಸಗಿ ಆಸ್ತಿ, ದಕ್ಷಿಣಕ್ಕೆ: ಖಾಸಗಿ ಆಸ್ತಿ, ಪೂರ್ವಕ್ಕೆ: ಮುಖ್ಯರಸ್ತೆ, ಪಶ್ಚಿಮಕ್ಕೆ: ವಿ.ಎಸ್.ಕೃಷ್ಣಮೂರ್ತಿ.
ಶ್ರೀ ನರೇಶ್ ಅವರು ದಯವಿಟ್ಟು ಇದನ್ನು ಈ ನಿಟ್ಟಿನಲ್ಲಿ ಅಂತಿಮ ಜ್ಞಾಪನೆ ಎಂದು ಪರಿಗಣಿಸಬೇಕು.

ಸಹಿ/-
ಅಧಿಕೃತ ಅಧಿಕಾರಿ
ಕಾರ್ವಿ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್ ಪರವಾಗಿ

ದಿನಾಂಕ: 09.02.2024
ಸ್ಥಳ: ಬೆಂಗಳೂರು